# ಕನಕದಾಸರ ಸಾಮಾಜಿಕ ಆಶಯಗಳು

# Kanakadaasara Saamajika Ashayagalu

**Dr. K Anjanappa**

Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ನಮ್ಮ ದೇಶದ ಎಲ್ಲ ಮಹತ್ವದ ಸುಧಾರಣೆಗಳು ಧಾರ್ಮಿಕ ಸ್ವರೂಪ ವನ್ನು ಹೊಂದಿವೆ. ಬುದ್ಧ, ಬಸವ, ರಾಮಾನುಜರ ಚಳುವಳಿಗಳು ಈ ದೇಶದ ರೂಪವನ್ನೇ ಬದಲಾಯಿಸುವ ಮಟ್ಟಕ್ಕೆ ಹೋದದ್ದು ಧಾರ್ಮಿಕ ನೆಲೆಯಲ್ಲೇ ಎಂಬ ಸಂಗತಿ ಕುತೂಹಲಕರ. ಈ ಶತಮಾನದಲ್ಲಿ ಮಹಾತ್ಮ ಗಾಂಧೀಜಿಯವರು ವಿಮೋಚನೆಯ ಹೋರಾಟಕ್ಕೆ ಭಾರತೀಯರನ್ನು ಸಜ್ಜುಗೊಳಿಸಲು ಜನಸಾಮಾನ್ಯರೊಂದಿಗೆ ಧಾರ್ಮಿಕ ಪರಿಭಾಷೆಯ ಮೂಲಕವೇ ಸಂವಾದ ಏರ್ಪಡಿಸಿಕೊಂಡರು. ನಮ್ಮ ಧರ್ಮ ಮತ್ತು ಸಂಸ್ಕೃತಿಯ ಪ್ರಗತಿ ಪರ, ಮಾನವೀಯ ಅಂಶಗಳನ್ನು ಕ್ರಾಂತಿಕಾರಿಗಳು ಗಮನಿಸದೆ ಹೋದಲ್ಲಿ ಅದೊಂದು ದೊಡ್ಡ ಕೊರತೆ  ಎಂಬುದರಲ್ಲಿ ಸಂಶಯವಿಲ್ಲ. ಹದಿನೈದನೇ ಶತಮಾನದಲ್ಲಿ ಕವಿಯಾಗಿ, ಕ್ರಾಂತಿಕಾರಿಯಾಗಿ ನಮ್ಮ ಜೀವನವನ್ನು ಉನ್ನತಿ ಸೇರಿಸಲು ಶ್ರಮಿಸಿದ ಕನಕದಾಸರನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳ ಬೇಕಾಗಿದೆ.

ತಾರತಮ್ಯಗ್ರಸ್ಥವಾದ ಈ ಸಮಾಜ ವ್ಯವಸ್ಥೆಯಲ್ಲಿ ಕನಕದಾಸರು ತುಳಿತಕ್ಕೆ ಒಳಪಟ್ಟ ವರ್ಗದ ಧ್ವನಿಯಾಗಿದ್ದಾರೆ. ಆರ್ಥಿಕ ದೃಷ್ಟಿಯಿಂದ ಕನಕರು ಪ್ರತಿಷ್ಠಿತ ವರ್ಗದವರೆಂದೇ ಹೇಳಬೇಕು. ಯಾಕೆಂದರೆ ಅವರು ಸಾಮಂತರು. ಆದರೆ ಜಾತಿವ್ಯವಸ್ಥೆಯ ಸಂಕೀರ್ಣತೆಯ ಕಾರಣದಿಂದ ಪಾಳೇ ಗಾರರಾಗಿದ್ದ ಕನಕರಿಗೂ ಸಮಾನತೆಯ ನೈಜ ಅನುಭವ ಸಾಧ್ಯವಾಗಲಿಲ್ಲ.

ಅವರು ವಿರಕ್ತರಾಗಿ, ದಾಸರಾಗಿ, ಶ್ರೇಷ್ಠ ಭಕ್ತರಾದ ಮೇಲೂ ಅಸ್ಪೃಶ್ಯತೆಯ ಅನುಭವವನ್ನು ಪಡೆಯಬೇಕಾಯಿತು. ಜಾತಿವರ್ಗಗಳ ಸಮಸ್ಯೆ ಕನಕರ ಬದುಕಿನಲ್ಲಿ ವಿಶಿಷ್ಟ ರೀತಿಯಲ್ಲಿ ಕಾಣಿಸಿಕೊಂಡು ಈ ಸಂಬಂಧದ ಕಟುಸತ್ಯ ವನ್ನೇ ಪ್ರಕಟಿಸಿದೆ. ಒಮ್ಮೆ ಲೌಕಿಕ ಶ್ರೀಮಂತಿಕೆಯನ್ನೂ, ನಂತರ ಆಧ್ಯಾತ್ಮಿಕ ಸಂಪತ್ತನ್ನೂ ಗಳಿಸಿಕೊಂಡು ಶ್ರೇಷ್ಠರಾಗಿದ್ದ ಕನಕರನ್ನು ಜಾತಿ ಮತ್ತು ವರ್ಣಾಶ್ರಮದ ಸಮಸ್ಯೆ ಗಾಢವಾಗಿ ಕಲಕಿದೆ. ಈ ಸಮಸ್ಯೆಗೆ ಕನಕರು ಸ್ವಾಭಿಮಾನದ ಘೋಷಣೆಯ ಪರಿಹಾರವನ್ನು ಕಂಡುಕೊಂಡರು. ಅವರು ತಮ್ಮ ಕೀರ್ತನೆಗಳಲ್ಲಿ "ನಾವು ಕುರುಬರು ನಮ್ಮ ದೇವರೋ ಬೀರಯ್ಯ" ಮತ್ತು ಯಾತರವನೆಂದುಸುರಲಿ ಜಗನ್ನಾಥ ಮಾಡಿದ ಒಂದು ನರರೂಪ ವಯ್ಯಾ" ಎಂದು ಹೇಳುವ ಸಂದರ್ಭಗಳಲ್ಲಿ ತಮ್ಮ ಜಾತಿಯನ್ನು ಕುರಿತು ಅಪಹಾಸ್ಯ ಮಾಡಿದ ಜಾತಿ ವ್ಯಾಮೋಹಿಗಳಿಗೆ ಸೂಕ್ತವಾರ ಉತ್ತರವನ್ನು ಕೊಟ್ಟ ದ್ದಾರೆ. ಅಪಮಾನಗೊಂಡ ಜಾತಿಗಳ ವಿಮೋಚನೆ, ಆ ಜನ ವರ್ಗದವರು ತಮ್ಮ ಜಾತಿಯನ್ನು ಬಹಿರಂಗವಾಗಿ ಘೋಷಿಸಿಕೊಂಡಾಗ ಪ್ರಾರಂಭವಾಗು ಇದೆ ಎಂಬುದನ್ನು ಒಪ್ಪುವುದಾದರೆ ಕನಕದಾಸರು ಈ ಬಂಡಾಯ ಕ್ರಿಯೆಯನ್ನು ಬಹು ಹಿಂದೆಯೇ ಪ್ರಾರಂಭಿಸಿದ್ದಾರೆ ಎಂದು ಹೇಳಬಹುದು. ಹನ್ನೆರಡನೇ ಶತಮಾನದ ವಚನಕಾರರು ವೈದಿಕ ಧರ್ಮದ ವಿರುದ್ಧ ಬಂದೆದ್ದು ಪರಾಯ ಧಾರ್ಮಿಕ ವ್ಯವಸ್ಥೆಯನ್ನು ಕಂಡುಕೊಂಡರು. ಕನಕರು ವೈದಿಕ ವ್ಯವಸ್ಥೆಯನ್ನು ಸಂಪೂರ್ಣ ತಿರಸ್ಕರಿಸದಿದ್ದರೂ ಭಕ್ತಿ ಚಳುವಳಿಯ ಮೂಲಕ ಅದಕ್ಕೆ ಹಲವು ಬಗೆಯ ಸವಾಲುಗಳನ್ನೆಸೆದರು. ಮೂಲ ಮೂಲ ಸಾಮಾಜಿಕಯಿಂದ ಕನಕದಾಸರು ವಚನ ಚಳುವಳಿಯ ಮುಂದುವರಿದ ಆಶಯಗಳ ದೃಷ್ಟಿ ಭಾಗವೆಂದು ಹೇಳಬಹುದು. ವಚನ ಚಳುವಳಿಯ ಸಂದರ್ಭದಲ್ಲಿ ದೊಡ್ಡ ಜನಸಮೂಹವೇ ಜಾತಿ ವ್ಯವಸ್ಥೆಯ ವಿರುದ್ಧ ದನಿ ಎತ್ತಿದರೆ ತಮ್ಮ ಕಾಲದಲ್ಲಿ ಕನಕರು ಏಕಾಂಗವೀರನಾಗಿ ಈ ದುಷ್ಟ ವ್ಯವಸ್ಥೆಯನ್ನು ಎದುರಿಸಿದ್ದಾರೆ.

ಕುರುಬ ಜನಾಂಗದಲ್ಲಿ ಹುಟ್ಟಿದ ಕಾರಣಕ್ಕಾಗಿ ಸಮಾಜದ ಮೇಲ್ವರ್ಗ ತೋರಿದ ಪ್ರತಿಕ್ರಿಯೆಗಳಿಂದ ಕನಕದಾಸರ ವ್ಯಕ್ತಿತ್ವ ಮಾನವೀಯವಾಗಿ ವಿಕಸನ ಹೊಂದಿತೇ ಹೊರತು, ಕೀಳರಿಮೆಯಿಂದ ಕುಗ್ಗಲಿಲ್ಲ. ತಂಬೂರಿ ಹಿಡಿದು ಊರೂರು ಸಂಚರಿಸುತ್ತಾ ಸಾಗಿದ ಕನಕರ ಬದುಕು ಪವಾಡ ಕೇಂದ್ರಿತ ವೆನ್ನುವುದಕ್ಕಿಂತ ಶಿಕ್ಷಣ ಕೇಂದ್ರಿತವೆನ್ನಬಹುದು. ತಮ್ಮ ಕೀರ್ತನೆ, ಬೋಧನೆಗಳ ಮೂಲಕ ಪತಿತ ವರ್ಗದವರನ್ನು ಮೇಲೆತ್ತಲು ಅವರು ಪ್ರಯತ್ನಿಸಿದರು. ಜನಸಾಮಾನ್ಯರ ಶಿಕ್ಷಕರಾದರು. ಯಾರೂ ಇಲ್ಲದ ಜಾಗದಲ್ಲಿ ಬಾಳೆಹಣ್ಣು ತಿನ್ನಬೇಕೆಂದು ಗುರುಗಳು ಹೇಳಿದಾಗ, ಕನಕರು ತಿನ್ನದೇ ಹೋದದ್ದು, ಯಾರು ಸ್ವರ್ಗಕ್ಕೆ ಹೋಗುತ್ತೀರಿ ಎಂದಾಗ ನಾನು ಹೋದರೆ ಹೋಗ ಬಹುದು ಎಂದು ಮಾರ್ಮಿಕವಾಗಿ ಹೇಳಿದ್ದು, ಮುಷ್ಟಿಯನ್ನು ಮುಚ್ಚಿ ಕೊಂಡು ಇದರಲ್ಲಿ ಏನಿದೆ ಎಂದಾಗ 'ವಾಸುದೇವ' ಎಂದು ಉತ್ತರ ಕೊಟ್ಟ ಪ್ರಸಂಗಗಳನ್ನು ಪವಾಡಗಳೆನ್ನುವುದಕ್ಕಿಂತ ಕನಕರ ಸೂಕ್ಷ್ಮ ಬುದ್ಧಿಶಕ್ತಿಯ ಪ್ರತೀಕವೆನ್ನ ಬಹುದು.

ಕನಕದಾಸರ ಬದುಕಿನಲ್ಲಿ ಪ್ರಮುಖವಾದ ಪವಾಡ ಪ್ರಸಂಗವೊಂದು ಚಿಂತನ ಯೋಗ್ಯವಾಗಿದೆ. ಈ ಪವಾಡವು ಕನಕದಾಸರಿಂದ ನಡೆದದ್ದಲ್ಲ ದಿದ್ದರೂ ಕನಕರನ್ನು ಕೇಂದ್ರವಾಗಿಸಿದ ಘಟನೆಯು ದೈವದ ಪ್ರವೇಶದಿಂದ ಪವಾಡದ ರೂಪವನ್ನು ಪಡೆದುಕೊಂಡಿದ್ದಾಗಿದೆ. ಕನಕರ ಭಕ್ತಿಯ ಉನ್ನತಿಯನ್ನು ಲೋಕಪ್ರಸಿದ್ಧಗೊಳಿಸುವುದೇ ಇದರ ಆಶಯವೆನಿಸುತ್ತದೆ. ತಾರ್ಕಿಕ ದೃಷ್ಟಿಯಿಂದ ನೋಡಿದಾಗ ಲೋಕದ ಎಲ್ಲಾ ಪವಾಡಗಳೂ ಪೂರ್ವಾರ್ಧ ಸತ್ಯವೆಂದೂ, ಉತ್ತರಾರ್ಧ ಕಲ್ಪಿತವೆಂದೂ ಹೇಳಬಹುದು. ಯಾಕೆಂದರೆ ಯಾವುದೇ ಪವಾಡದ ಪೂರ್ವಾರ್ಧ ಲೌಕಿಕವೂ, ಸಂಭವನೀಯವೂ ಆಗಿ ಮನುಷ್ಯರು ಇದರಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಆದರೆ ಉತ್ತರಾರ್ಧದಲ್ಲಿ ಈ ಘಟನೆಗೆ ಅಲೌಕಿಕ ಸಂಪರ್ಕವೇರ್ಪಟ್ಟು ದೈವ ಅಥವಾ ಅಗೋಚರ ಶಕ್ತಿಯ ಪ್ರವೇಶವಾಗಿ ತರ್ಕಾತೀತವಾದ ಅಂತ್ಯವನ್ನು ಪಡೆಯುತ್ತದೆ. ಅಲೌಕಿಕತೆ ಈ ಘಟನೆಗೆ ಪವಾಡದ ಮಹತ್ವವನ್ನು ತರುತ್ತದೆ. ಕನಕದಾಸರ ಕನಕನ ಕಿಂಡಿಯ ಪವಾಡವನ್ನು ಈ ಹಿನ್ನೆಲೆಯಲ್ಲೇ ಚಿಂತಿಸಬಹುದು. ಉಡುಪಿಯ ಶ್ರೀ ಕೃಷ್ಣ ದೇವಾಲಯಕ್ಕೆ ಕನಕರಿಗೆ ಪ್ರವೇಶ ನೀಡದೆ ಹೋದದ್ದು ಘಟನೆಯ ಪೂರ್ವಾರ್ಧ. ಕನಕನ ಕಿಂಡಿಯ ನಿರ್ಮಾಣ ಉತ್ತರಾರ್ಧವಾಗಿದ್ದು ಅಲೌಕಿಕವಾಗಿದೆ. ಇದೇ ತರ್ಕವನ್ನು ಬಹುಪಾಲು ಪವಾಡಗಳಿಗೆ ಅನ್ವಯಿಸಬಹುದು. ಬೇಡರ ಕಣ್ಣಪ್ಪ ಕಣ್ಣುಕಿತ್ತು ಕೊಟ್ಟ ಘಟನೆ ಸಂಭವನೀಯವಾದರೆ, ಶಿವನ ಪ್ರವೇಶ ಅಲೌಕಿಕ, ನಂದನಾರ್ ಅಗ್ನಿ ಪ್ರವೇಶ ಮಾಡಿದ್ದು ಸಂಭವನೀಯವಾದರೆ, ಅಗ್ನಿಯಿಂದ ಮರಳಿ ಬಂದ ಉತ್ತರಾರ್ಧ ಅಲೌಕಿಕ. ಆದ್ದರಿಂದ ಕನಕದಾಸರಿಗೆ ಅಪಮಾನವಾದ ಘಟನೆ ಯನ್ನು ಸಂಭವನೀಯವೆಂದು ಪರಿಗಣಿಸಿ ಕನಕನ ಕಿಂಡಿಯ ನಿರ್ಮಾಣ ಅವರ ಭಕ್ತಿಯ ಉನ್ನತಿಯನ್ನು ಸಮಾಜಕ್ಕೆ ಸಾರಲು ಏರ್ಪಟ್ಟ ಸಾಧನವೆಂದು ಭಾವಿಸಬಹುದು. ಈ ಘಟನೆಗೆ ಮೂಲ ಕಾರಣವಾದ ಕುಲ ಸಮಸ್ಯೆ ಕನಕರ ಕೀರ್ತನೆಗಳಲ್ಲಿ ವಿಶಿಷ್ಟ ಬಗೆಯ ಅಭಿವ್ಯಕ್ತಿಯನ್ನು ಪಡೆದಿದೆ. ಜಾತಿ ವ್ಯವಸ್ಥೆಯ ಪೊಳ್ಳುತನವನ್ನು ಬಯಲು ಮಾಡುವ ಮೂಲಕ ಮೇಲು ಕೀಳು ಮೌಲ್ಯ ವ್ಯವಸ್ಥೆಯನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

ಕನಕರ ಲೌಕಿಕ ಚಿಂತನೆಗಳು, ಅವರ ಅಂತರಂಗದ ಹಂಬಲದ ಕಿರಣಗಳೂ, ಹೌದು ಬಳಲುವ ವ್ಯಕ್ತಿಯಾಗಲೀ, ಶಿಶುವಾಗಲೀ ಕನಕರ ಅಂತಃ ಕರಣವನ್ನು ಕಲಕಬಲ್ಲರು. ಉಳ್ಳವರು ಹಸನಾದ ಭೂಮಿಯನ್ನು ಇಲ್ಲದವರಿಗೆ ಧಾರೆಎರೆಯಬೇಕೆಂಬ ಸಮಾಜವಾದಿ ಕನಸನ್ನು ನೂರಾರು ವರ್ಷಗಳ ಹಿಂದೆಯೇ ಕನಕರು ಕಂಡದ್ದರಿಂದ ಅವರುನ ಮಗೆ ಪ್ರಸ್ತುತ ರಾಗುತ್ತಾರೆ. ವಿಶಿಷ್ಟ ಕಾವ್ಯವಾದ 'ರಾಮಧಾನ್ಯ ಚರಿತೆ' ವರ್ಗ ವ್ಯವಸ್ಥೆಯನ್ನು ಕುರಿತು ಕವಿ ವ್ಯಕ್ತಪಡಿಸಿದ ತೀವ್ರವಾದ ಪ್ರತಿಕ್ರಿಯೆಗೆ ಸಾಕ್ಷಿ. ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷದಲ್ಲಿ ಬಡವನಿಗೇ ಜಯವೆಂಬ ಕ್ರಾಂತಿಕಾರಕ ಸಂದೇಶವನ್ನು ಆ ಕೃತಿಯಲ್ಲಿ ನೀಡಿದ್ದಾರೆ. "ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ತುತ್ತು ಹಿಟ್ಟಿಗಾಗಿ" ಎಂಬ ಕೀರ್ತನೆಯಲ್ಲಿ ಆರ್ಥಿಕ ಹಿನ್ನೆಲೆಯಲ್ಲಿ ಜೀವನವನ್ನು ಪರಿಶೀಲಿಸುವ ವಾಸ್ತವಿಕ ಪ್ರಜ್ಞೆ ವ್ಯಕ್ತವಾಗಿದೆ. ವೇದ, ಶಾಸ್ತ್ರ, ಪಂಚಾಂಗ ಓದುವುದಾಗಲೀ, ಯುದ್ಧ ಮಾಡುವುದಾಗಲೀ, ವ್ಯಾಪಾರ, ಕೃಷಿ ಮಾಡುವುದಾಗಲೀ ಜೀವ ನೋಪಾಯದ ಮಾರ್ಗಗಳೆಂದು ಹೇಳಿ ವೃತ್ತಿಗಳಲ್ಲಿರುವ ತಾರತಮ್ಯ ಭಾವನೆಯನ್ನು ಅಲ್ಲಗಳೆದಿದ್ದಾರೆ.

ಕನಕರ ಕೀರ್ತನೆಗಳಲ್ಲಿ ಕಂಡು ಬರುವ ದೈವದ ಮಾನವೀಕರಣ ಕ್ರಿಯೆ ಗಮನನಾರ್ಹವಾದದ್ದು. "ಎನ್ನ ಕಂದ ಹಳ್ಳಿಯ ಹನುಮ ಚೆನ್ನಾಗಿ ಇದರೇ ಲಕ್ಷ್ಮಣ ದೇವರು" ಎಂಬ ಸಾಲಾಗಲಿ, "ಕಾಸು ಕಾಸಿಗೆ ಬಡ್ಡಿಯ ಗಳಿಸಿಕೊಂಬ ಆದಿಕೇಶವ ನಾರಾಯಣ ತಿಮ್ಮಶೆಟ್ಟಿ" ಎಂಬ ಅಭಿವ್ಯಕ್ತಿಯಾಗಲಿ ಕನಕದಾಸರು ದೈವವನ್ನು ಆಪ್ತ ಬಂಧುವಿನಂತೆ ಪರಿಭಾವಿಸುವ ರೀತಿಗೆ ಸಾಕ್ಷಿ. ಜನಪದ ಸಂಸ್ಕೃತಿಯ ವಿಶಿಷ್ಟ ಗುಣವಾದ ಈ ಪ್ರವೃತ್ತಿ ಕನಕರ ರಚನೆಗಳಲ್ಲಿ ವಿಪುಲವಾಗಿ ವ್ಯಕ್ತವಾಗಿದೆ.

ಸಮಕಾಲೀನ ಸಂದರ್ಭದ ಧಾರ್ಮಿಕ ಬೂಟಾಟಿಕೆಯನ್ನು ಈ ಕವಿ ಉಗ್ರವಾಗಿ ಖಂಡಿಸಿದ್ದಾರೆ. ಆಚರಣೆಗಳೇ ಶ್ರೇಷ್ಟವಲ್ಲ, ಅವುಗಳ ಹಿಂದಿನ ಮಾನವೀಯ ತುಡಿತ ಮುಖ್ಯವೆಂದು ಅವರ ಭಾವನೆ, ನೀರು ಮುಳುಗಿ ದರೂ, ನಾರಿಯನ್ನು ಬಿಟ್ಟರೂ, ಮನಶುದ್ಧಿಯಾಗದವರನ್ನೂ ಕಂಡು ಕನಿಕರಿ ಸಿದ್ದಾರೆ. "ತೀರ್ಥ ಪಿಡಿದವರೆಲ್ಲ ತಿರುನಾಮಧಾರಿಗಳೆ" ಎಂದು ಸಂಶಯ ವ್ಯಕ್ತಪಡಿಸಿದ್ದಾರೆ. ಅರ್ಥಹೀನ ಆಚರಣೆಯಲ್ಲಿ ತೊಡಗಿ ಜೀವನದ ಅಮೂಲ್ಯ ಕಾಲವನ್ನು ವ್ಯರ್ಥ ಮಾಡಿಕೊಳ್ಳುವ, ಸಮಾಜದ ಶೋಷಣೆಗೆ ಕುಮ್ಮಕ್ಕು ನೀಡುವ ಎಲ್ಲಾ ಜಾತಿ, ಧರ್ಮದ ವ್ಯಕ್ತಿಗಳನ್ನು ಕಟುವಾದ ಶಬ್ದಗಳಿಂದ ಅಪಹಾಸ್ಯ ಮಾಡಿದ್ದಾರೆ.

ಆಧುನಿಕ ಕ್ರಾಂತಿಕಾರಿಗೆ ಸಾಧ್ಯವಿಲ್ಲದ ಕುಣಿಯುವ, ಹಾಡುವ, ಹಾಸ್ಯ ಮಾಡುವ ವಿಶಿಷ್ಟ ಪ್ರವೃತ್ತಿ ಕನಕರಿಗೆ ಸಿದ್ಧಿಸಿತ್ತು. ಅವರು ದೂರದ ಬದಲಾವಣೆಗಿಂತ ತಮ್ಮ ಜನವರ್ಗದ ನಿತ್ಯ ಜೀವನದ ಬದಲಾವಣೆಯನ್ನು ಹಾರೈಸಿದರು. ಶಿಸ್ತು, ಪರಿಶುದ್ಧತೆಯ ಧಾರ್ಮಿಕ ಜೀವನವನ್ನು ಕೆಳವರ್ಗದವರಿಗೆ ಬೋಧಿಸಿದರು. ತಮ್ಮ ಕಾಲದಲ್ಲಿ ನಡೆಯುತ್ತಿದ್ದ ಬೇವಿನುಡಿಗೆಯ ಸೇವೆ, ಬೆತ್ತಲೆ ಸೇವೆಯನ್ನು ಗೇಲಿ ಮಾಡಿದರು. ಕೆಳವರ್ಗದ ವಿಮೋಚನೆಗೆ ವೈದಿಕೀಕರಣದ ಪರಿಹಾರವನ್ನು ಸೂಚಿಸಿದರೂ, ಕನಕರದು ಬಂಡಾಯ ಮನೋಧರ್ಮ, ಬೀರಪ್ಪ ದೈವದಿಂದ ಆದಿಕೇಶವನವರೆಗೆ ಅವರ ಸಾಂಸ್ಕೃತಿಕ ಪ್ರಯಾಣ ಕುತೂಹಲಕಾರಿ, ಆದರೆ ಕೆಳವರ್ಗದವರು ತಮ್ಮ ಸಾಂಸ್ಕೃತಿಕ ಸಮಸ್ಯೆಯ ಪರಿಹಾರಕ್ಕೆ ಜನಪದ ಸಂಸ್ಕೃತಿಯಲ್ಲೇ ಉತ್ತರವನ್ನು ಕಂಡು ಕೊಳ್ಳುವ ಅಗತ್ಯವಿದೆ.